**ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡ**

ಲಕ್ಕಮ್ಮನಹಳ್ಳಿ ಕೈಗಾರಿಕಾ ಪ್ರದೇಶ, ಪಿ ಬಿ ರಸ್ತೆ, ವಿದ್ಯಾಗಿರಿ ಅಂಚೆ, ಧಾರವಾಡ – 580 004

ದೂ.ಸಂಖ್ಯೆ: 2467603/2468380 E-mail-dharwarnin@gmail.com

---

# ಸೇರ್ಪಡೆ ಅಧಿಸೂಚನೆ

**(ಹಾಲಿನ ಟ್ಯಾಂಕರ್ ಇ–ಟೆಂಡರ ಪ್ರಕಟಣೆಯಾಗಿರುವುದಕ್ಕೆ ಸಂಬಂಧಿಸಿದಂತೆ)**

ಇ–ಟೆಂಡರ ಪ್ರಕಟಣೆ ಸಂಖ್ಯೆ:– **DMU/PROD/CC & BMC-Tanker/2022/2216** ದಿ:–25.11.2022

**(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)**

**ಧಾರವಾಡ, ಗದಗ ಮತ್ತು ಉತ್ತರಕನ್ನಡ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಧಾರವಾಡವು** ವಿವಿಧ ಶೀತಲೀಕರಣ ಕೇಂದ್ರಗಳಿಂದ ಮತ್ತು ಬಲ್ಕ ಮಿಲ್ಕ ಕೂಲರ್‌ಗಳಿಂದ ಮುಖ್ಯಡೇರಿ ಧಾರವಾಡಕ್ಕೆ ಮತ್ತು ಮುಖ್ಯಡೇರಿ ಧಾರವಾಡ/ಶೀತಲ ಕೇಂದ್ರ / ಬಿ.ಎಂ.ಸಿ ಯಿಂದ ಕಹಾಮದ ಘಟಕ/ಇತರೆ ಒಕ್ಕೂಟಗಳು ಮತ್ತು ಹೊರರಾಜ್ಯದ ಘಟಕಗಳಿಗೆ ಕಚ್ಚಾ ಹಾಲು ಸಾಗಾಣಿಕೆ ಕೆಲಸವನ್ನು ರಸ್ತೆ ಹಾಲಿನ ಟ್ಯಾಂಕರ್‌ಗಳಲ್ಲಿ ನಿರ್ವಹಿಸಲು 2016 ನೇ & ಮೇಲ್ಪಟ್ಟ ಮಾದರಿಯ ಮಿಲ್ಕ ಟ್ಯಾಂಕರ್‌ಗಳನ್ನು ಹೊಂದಿದ ಆಸಕ್ತಿಯುಳ್ಳ ಮತ್ತು ಅರ್ಹ ಪ್ರತಿಷ್ಠಿತ ಸಾಗಾಣಿಕೆ ಗುತ್ತಿಗೆದಾರರಿಂದ / ಫ್ಲೀಟ್ ಮಾಲಿಕರಿಂದ 2 ವರ್ಷದ ಅವಧಿಗೆ ಗುತ್ತಿಗೆ ನಿರ್ವಹಿಸಲು ದಿ:–**25.11.2022** ರಂದು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ, ಅಲ್ಲದೇ ಹೆಚ್ಚಿನ ಪ್ರಚಾರಾರ್ಥವಾಗಿ ದಿ:–**27.11.2022** ರಂದು **"ವಿಜಯಕರ್ನಾಟಕೆ"** ರಾಜ್ಯ ಆವೃತ್ತಿ ಕನ್ನಡ ದಿನಪತ್ರಿಕೆಯಲ್ಲಿ ಹಾಗೂ ಕಹಾಮ ವೆಬ್‌ಸೈಟ್‌ನಲ್ಲಿ ನಮ್ಮ ವಾಹನ ಟೆಂಡರ ಪ್ರಕಟಣೆ ಸಂಖ್ಯೆ:– **DMU/PROD/CC & BMC-Tanker/2022/2216** ನ್ನು ಪ್ರಕಟಿಸಿ ಟೆಂಡರ ಆಹ್ವಾನಿಸಲಾಗಿತ್ತು.

ಆದರೆ ಸದರ ಟೆಂಡರನಲ್ಲಿ ಹೆಚ್ಚಿನ ಟೆಂಡರುದಾರರು ಭಾಗವಹಿಸಲು ಮತ್ತು ಸ್ಪರ್ಧಾತ್ಮಕ ದರ ಪಡೆಯುವ ಉದ್ದೇಶದಿಂದ ಸಂಬಂಧಪಟ್ಟ ಮಾರ್ಗದ ಸಾಮರ್ಥ್ಯಕ್ಕೆ ಅನುಗುಣವಾಗಿ **"ನೂತನ ರಸ್ತೆ ಹಾಲಿನ ಟ್ಯಾಂಕರ್‌ನ್ನು ಖರೀದಿಸಿ"** ಒದಗಿಸಲು ಇಚ್ಛೆಯುಳ್ಳ ಸಾಗಾಣಿಕೆದಾರರಿಗೂ ಸಹ ಕರೆದ ಟೆಂಡರನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಇಂತಹ ಟೆಂಡರುದಾರರಿಗೆ ಅನ್ವಯವಾಗುವ ಕೆಲವು ಹೆಚ್ಚುವರಿ ಷರತ್ತುಗಳನ್ನು ಸಹ ಸೇರ್ಪಡೆ ಇ–ಪೋರ್ಟಲ್‌ನಲ್ಲಿ ಅನುಬಂಧ (Addendum) ವನ್ನು ನೀಡಲಾಗಿದೆ. ಕಾರಣ ಈಗಾಗಲೇ ಇ–ಪೋರ್ಟಲ್‌ನಲ್ಲಿ ಅಪಲೋಡ್ ಮಾಡಿದ ಟೆಂಡರ ದಾಖಲಾತಿಗಳ ಸಂಗಡ, ಸೇರ್ಪಡೆ ಷರತ್ತುಗಳನ್ನು ಸಹ ಟೆಂಡರುದಾರರು ಪರಿಗಣಿಸಿ ಟೆಂಡರ ಸಲ್ಲಿಸುವುದಾಗಿರುತ್ತದೆ.

ಉಳಿದಂತೆ ಕರಾರು & ಷರತ್ತುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**ಕಾರ್ಯನಿರ್ವಾಹಕ ನಿರ್ದೇಶಕರು**